# ನಗರ ಸಭೆ, ಚಿಕ್ಕಮಗಳೂರು

ದಿನಾಂಕ : 23-01-2007 ನೇ ಮಂಗಳವಾರ ಪೂರ್ವಾಹ್ನ ಬೆಳಿಗ್ಗೆ 11-00 ಗಂಟೆಗೆ ನಗರ ಆಶ್ರಯ ಸಮಿತಿಯ ಅದ್ಯಕ್ಷರಾದ ಹಾಗೂ ಮಾನ್ಯ ಶಾಸಕರಾದ ಶ್ರೀ. ಸಿ.ಟಿ. ರವಿ ರವರ ಅಧ್ಯಕ್ಷತೆಯಲ್ಲಿ ನಡೆದ ಆಶ್ರಯ ಸಮಿತಿ ಸಭೆಯ ನಡಾವಳಿಗಳು.

*** *** ***

| | |
|---|---|
| ಸದಸ್ಯರ ಹಾಜರಿ | 8 |
| ಗೈರುಹಾಜರಿ | - |
| ಒಟ್ಟು | 8 |

---

ವಿಷಯ 1 :

2002-03 ನೇ ಸಾಲಿನಲ್ಲಿ ಮಾಡಿರುವ ೧೦೦ ಆಶ್ರಯ ಮನೆಗಳ ಹಕ್ಕುಪತ್ರಗಳನ್ನು ಫಲಾನುಭವಿಗಳಿಗೆ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ವಿಚಾರ.

ತೀರ್ಮಾನ :

2002-03 ನೇ ಸಾಲಿನಲ್ಲಿ ನಗರದ ರಾಮೇಶ್ವರ ಕೆರೆ ಬಳಿ ಇಂದಿರಾನಗರದಲ್ಲಿ ಒಟ್ಟು ೩೦೦ ಫಲಾನುಭವಿಗಳಿಗೆ ಆಶ್ರಯ ಮನೆಗಳನ್ನು ಮಂಜೂರು ಮಾಡಲು ಆಶ್ರಯ ಸಮಿತಿ ಸಭೆ ಟೀರ್ಮಾನಿಸಿದ್ದು, ಈ ಪೈ 200 ಜನ ಫಲಾನುಭವಿಗಳನ್ನು ಆಯ್ಕೆ ಮಾಡಿ ಆಶ್ರಯ ಮನೆಗಳನ್ನು ಮಂಜೂರು ಮಾಡಿ ಹಕ್ಕುಪತ್ರ ನೀಡಲಾಗಿರುತ್ತದೆ. ಈ 200 ಮನೆಗಳಲ್ಲಿ ಕೆಲವೇ ಮಂದಿ ಫಲಾನುಭವಿಗಳು ಮಾತ್ರ ವಾಸವಾಗಿದ್ದು, ಇನ್ನುಳಿದ ಮನೆಗಳಲ್ಲಿ ಫಲಾನುಭವಿಗಳು ವಾಸವಾಗಿರದೇ ಬೇರೆಯವರಿಗೆ ಬಾಡಿಗೆಗೆ : ಬೋಗ್ಯಕ್ಕೆ ನೀಡಿದ್ದು, ಇನ್ನೂ ಕೆಲವರು ಸ್ವಂತ ಮನೆಗಳನ್ನು ಹೊಂದಿದ್ದರೂ ಸುಳ್ಳು ಮಾಹಿತಿ ನೀಡಿ ಆಶ್ರಯ ಮನೆಗಳನ್ನು ಪಡೆದಿರುತ್ತಾರೆ. ಮತ್ತು  ಒಂದೇ ಕುಟುಂಬದ 3-4 ಜನ ಸದಸ್ಯರು ಆಶ್ರಯ ಮನೆಗಳನ್ನು ಪಡೆದಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುತ್ತವೆ.

ಈ ಬಗ್ಗೆ ಆಶ್ರಯ ಸಮಿತಿ ಸದಸ್ಯರುಗಳು ಮತ್ತು ಕಂದಾಯ ಅಧಿಕಾರಿ, ಕಂದಾಯ ಪರಿವೀಕ್ಷಕರುಗಳು ಜಂಟಿಯಾಗಿ ಸ್ಥಳತನಿಖೆ ನಡೆಸಿ ಕೂಲಂಕುಷವಾಗಿ ಪರಿಶೀಲಿಸಿ ಇಂತಹ ಫಲಾನುಭವಿಗಳ ಹಕ್ಕು ಪತ್ರಗಳನ್ನು ರದ್ದುಪಡಿಸಲು ಮುಂದಿನ ಸಭೆಗೆ ವಿವರವಾದ ವರದಿ ನೀಡುವಂತೆ ಸಭೆ ನಿರ್ಣಯಿಸಿತು. ಮುಂದುವರಿದು ಈಗ ಮನೆಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವ ಕಡು ಬಡವರು, ಆಶ್ರಯ ಮನೆ ಹೊಂದಲು ಅರ್ಹತೆ ಇರುವ ವಸತಿಹೀನ, ಅರ್ಹರ ಪಟ್ಟಿ ತಯಾರಿಸಿ ಅವರಿಂದ ಸೂಕ್ತ  ರೀತಿಯಲ್ಲಿ ಅರ್ಜಿ ಬಂದರೆ ಪರಿಶೀಲಿಸಿ ಹಕ್ಕುಪತ್ರ ನೀಡುವ ಬಗ್ಗೆ ಮುಂದಿನ ಆಶ್ರಯ ಸಮಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ನಿರ್ಣಯ ಕೈಗೊಳ್ಳುವ ಬಗ್ಗೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಅರ್ಜಿಗಳು ಬಾರದಿದ್ದರೆ ಅನರ್ಹರು, ಇತರೆ ಅನಧಿಕೃತವಾಗಿ ಸೇರಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ತೆಗೆದು ಕೊಳ್ಳಲು ಆಶ್ರಯ ಸಮಿತಿ ಸಭೆ ನಿರ್ಣಯಿಸಿತು.

2002-03 ನೇ ಸಾಲಿನಲ್ಲಿ ಮಂಜೂರು ಮಾಡಿರುವ 100 ಮನೆಗಳಿಗೆ ಮನೆ ಕೋರಿ ಈಗಾಗಲೇ ಅರ್ಜಿ ಸಲ್ಲಿಸಿರುವವರ ಪೈಕಿ ಅರ್ಹರಾಗಿರುವ ಹಾಲಿ ವಾಸವಾಗಿರುವ ವಸತಿ ಹೀನರ ಮನವಿಗಳನ್ನು ಆಶ್ರಯ ಸಮಿತಿ ಸದಸ್ಯರುಗಳು ಮತ್ತು ಕಂದಾಯ ಪರಿವೀಕ್ಷಕರು ಪರಿಶೀಲಿಸಿ, 100 ಜನ ಸೂಕ್ತ ಅರ್ಹತೆ ಇರುವ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳನ್ನು ಆಯ್ಕೆ ಮಾಡಿ 100 ಜನ ಫಲಾನುಭವಿಗಳ ಪಟ್ಟಿಯನ್ನು ಹಕ್ಕುಪತ್ರ ವಿತರಿಸುವ ಬಗ್ಗೆ ಮಂಜೂರಾತಿಗಾಗಿ ಮುಂದಿನ ಆಶ್ರಯ ಸಮಿತಿ  ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

ಅಧ್ಯಕ್ಷರು ಮಾತನಾಡುತ್ತಾ ನಗರದ ರಾಮೇಶ್ವರ ಕೆರೆ ಬಳಿ ಹಕ್ಕಿಪಿಕ್ಕಿ ಜನಾಂಗದವರು ತಾತ್ಕಲಿಕವಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದು, ಮನೆಗಳನ್ನು ಕೋರಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುರುತ್ತಾರೆ ಎಂದು ತಿಳಿಸುತ್ತಾ, ಈ ಬಗ್ಗೆ ಜಿಲ್ಲಾಧಿಕಾರಿಗಳು ಆಶ್ರಯ ಸಮಿತಿಯಲ್ಲಿ ಕ್ರಮ ಕೈಗೊಳ್ಳ ಸೂಚಿಸಿರುತ್ತಾರೆ. ಈ ಬಗ್ಗೆ ತಹಶೀಲ್ದಾರ್ ರವರು, ಚಿಕ್ಕಮಗಳೂರು ತಾಲ್ಲೂಕು ಇವರು ಪರಿಶೀಲಿಸಿ 21 ಜನ ಹಕ್ಕಿಪಿಕ್ಕಿ ಜನಾಂಗದವರ ಪಟ್ಟಿಯನ್ನು ಸಲ್ಲಿಸಿದ್ದು, ಮನೆ ನೀಡುವ ಬಗ್ಗೆ ಶಿಫಾರಸ್ ಮಾಡಿದ್ದು ಅದರಂತೆ ಈ 21 ಜನರಿಗೆ ಆಶ್ರಯ ಯೋಜನೆಯಡಿ ಮನೆಗಳನ್ನು ಮಂಜೂರು ಮಾಡಬಹುದಾಗಿದ್ದು, ಇವರುಗಳು ಫಲಾನುಭವಿ ಭರಿಸಬೇಕಾದ 5000-00 ಫಲಾನುಭವಿ ವಂತಿಕೆ ಪಾವತಿಸಲು ಸಾಧ್ಯವಿಲ್ಲದ ಕಾರಣ ಇವರು ಎಸ್‌ಟಿ ಪಂಗಡಕ್ಕೆ

PDF Created with deskPDF PDF Writer - Trial :: http://www.docudesk.com

ಸೇರಿದವರಾಗಿದ್ದು, ಫಲಾನುಭವಿಗಳು ಭರಿಸಬೇಕಾಗಿರುವ 5000-00 ರೂಗಳನ್ನು ಶೇ. 18 ರ ಯೋಜನೆಯಡಿ ಅನುದಾನದಲ್ಲಿ ಮಂಜೂರು ಮಾಡಿಕೊಡಬೇಕಾಗಿದೆ ಎಂದು ಸಭೆಗೆ ತಿಳಿಸುತ್ತಾ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ನಗರಸಭಾ ಅಧಿಕಾರಿಗಳಿಗೆ ಸೂಚಿಸಿದರು.

ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯಲ್ಲಿನ ಕೊಳಚೆ ಪ್ರದೇಶದಲ್ಲಿ ಅನಧಿಕೃತವಾಗಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಮನೆ ನಿರ್ಮಿಸಿಕೊಂಡು ವಾಸವಾಗಿರುವವರ ಪಟ್ಟಿಅಯನ್ನು ತಯಾರಿಸಿದ್ದು, ಇದರಲ್ಲಿ ಬಹಳಷ್ಟು ಜನ ಕಡು ಬಡವರು, ವಸತಿ ಹೀನರು ನಗರಸಭೆ ಜಾಗವನ್ನು ಒತ್ತುವರಿ ಮಾಡಿ ಮನೆ ಕಟ್ಟಿಕೊಂಡಿದ್ದಲ್ಲಿ ಮತ್ತು ರಸ್ತೆಗೆ ಅಡ್ಡಲಾಗಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಅಂತಹುಗಳನ್ನು ಪರಿಶೀಲಿಸಿ ತೆರವುಗೊಳಿಸುವುದು ಹಾಗೂ ಗರಿಷ್ಟ 20x30 ಅಡಿಗಿಂತ ಹೆಚ್ಚು ಪದೇಶದಲ್ಲಿ ಒತ್ತುವರಿ ಮಾಡಿ ಮನೆ ನಿರ್ಮಿಸಿಕೊಂಡಿದ್ದರೆ ಇಂತಹ ಜಾಗಕ್ಕೆ ಮಾರುಕಟ್ಟೆ ಬೆಲೆ ನಿಗಧಿಪಡಿಸಿ ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಹಕ್ಕುಪತ್ರ ನೀಡಬೆಕಿ ದು ಅಭಿಪ್ರಾಯಿಸಲಾಯಿತು ಹಾಗೂ 20x30 ಅಡಿ ಜಾಗದಲ್ಲಿ ಗುಡಿಸಲು ಕಟ್ಟಿಕೊಂಡು ವಾಸವಿರುವ ಅರ್ಹರುಗೆ ಆಶ್ರಯ ಯೋಜನೆಯಡಿ ಹಕ್ಕುಪತ್ರ ನೀಡಬೇಕೆಂದು ತಿಳಿಸಿದರು. ಫಲಾನುಭವಿಗಳು ಕನಿಷ್ಟ 5 ವರ್ಷಗಳ ಹಿಂದಿನಿಂದಲೂ ಈ ಜಾಗದಲ್ಲಿ ವಾಸವಾಗಿದ್ದು ಬಿಪಿಎಲ್ ಪಡಿತರ ಚೀಟಿ ಹೊಂದಿರಬೇಕು ಮತ್ತು ವಾಸದೃಡೀಕರಣ ಪತ್ರ, ಇತರೆ ಅಗತ್ಯ ದಾಖಲಾತಿಗಳನ್ನು ಪಡೆದು ಪರಿಶೀಲಿಸಿ ನಂತರ ಹಕ್ಕುಪತ್ರ ನೀಡುವ ಬಗ್ಗೆ ಕ್ರಮ ಸಂಬಂಧಿಸಿದಂತೆ ಸಂಪೂರ್ಣ ದಾಖಲೆ ಮತ್ತು ಮಾಹಿತಿಗಳೊದಿಗೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸರ್ಕಾರದಿಂದ ಬರುವ ತೀರ್ಮಾನದ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

ಅಧ್ಯಕ್ಷರು ಮಾತನಾಡುತ್ತಾ ನಗರದಲ್ಲಿ ಸೋಗೆ ಮನೆಗಳಲ್ಲಿ : ಗುಡಿಸಲುಗಳಲ್ಲಿ ವಾಸವಾಗಿರುವ ವಸತಿಹೀನರ ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮತ್ತು ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಪ್ರಸ್ತಾವನೆ ಸಲ್ಲಿಸಿ ವಸತಿ ರಹಿತರಿಗೆ ಮನೆಗಳನ್ನು ಮಂಜೂರು ಮಾಡಲು ಕೋರಲು ಸೂಚಿಸಿದರು.

ಆಶ್ರಯ ಸಮಿತಿ ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಗಳ ಕಛೇರಿ ಸಿಬ್ಬಂದಿ ಮತ್ತು ತಾಲ್ಲೂಕು ತಹಶೀಲ್ದಾರ್ ರವರ ಪರವಾಗಿ ಸಭೆಗೆ ಆಗಮಿಸಿದ್ದ ಅಧಿಕಾರಿಗಳಿಗೆ ಆಶ್ರಯ ಯೋಜನೆಯಡಿ ಸುಮಾರು 600 ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಾಣ ಮಾಡಿಸಿಕೊಡಲು ನಗರ ವ್ಯಾಪ್ತಿಯಲ್ಲಿ ಸೂಕ್ತ ಜಮೀನು ಗುರುತಿಸಿಕೊಡಲು ಸೂಚಿಸಿದರು.

ಈಗಾಗಲೇ ನಗರಸಭೆಗೆ ಆಶ್ರಯ ಯೋಜನೆಯಡಿ ಮನೆ: ನಿವೇಶನ ಕೋರಿ ಸುಮಾರು ೩೦೦೦ ಜನ ಅರ್ಜಿ ಸಲ್ಲಿಸಿದ್ದು ಈ ಅರ್ಜಿಗಳ ಬಗ್ಗೆ ಪರಿಶೀಲಿಸಿ ಹಂತ ಹಂತವಾಗಿ ಮನೆ : ನಿವೇಶನ ಮಂಜೂರು ಮಾಡುವ ಬಗ್ಗೆ ಕ್ರಮವಹಿಸಲಾಗುವುದು ಎಂದು ತಿಳಿಸಲಾಯಿತು. ಮತ್ತು 2007-08 ನೇ ಸಾಲಿಗೆ ೩೦೦೦ ಮನೆಗಳನ್ನು ಮಂಜೂರು ಮಾಡುವಂತೆ ರಾಜೀವ್‌ಗಾಂಧೀ ವಸತಿ ನಿಗಮ ನಿಯಮಿತದ ನಿರ್ದೇಶಕರನ್ನು ಕೋರಲು ತೀರ್ಮಾನಿಸಲಾಯಿತು.

ಗವನಹಳ್ಳಿಯಲ್ಲಿ ನಿರ್ಮಿತಿ ಕೇಂದ್ರ ವತಿಯಿಂದ ಆಶ್ರಯ ಮನೆಗಳ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಫಲಾನುಭವಿಗಳ ವಂತಿಕೆಯನ್ನು ನಿರ್ಮಿತಿ ಕೇಂದ್ರಕ್ಕೆ ಪಾವತಿಸದೇ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದಾಗಿ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದಾಗ ಈ ಬಗ್ಗೆ ಪೂರ್ಣ ಹಣ ಪಾವತಿಸುವುದಾಗಿ ತಿಳಿಸುತ್ತಾ, ಶೀಘ್ರವೇ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಅಧ್ಯಕ್ಷರು ಸೂಚಿಸಿದರು ಶಾಂತಿನಗರದಲ್ಲಿ ಆಶ್ರಯ ಮನೆಗಳಲ್ಲಿ ವಾಸವಾಗಿರುವ ಫಲಾನುಭವಿಗಳು ಸರ್ಕಾರಕ್ಕೆ ಪಾವತಿಸಬೇಕಾದ ಮೊತ್ತವನ್ನು ಪಾವತಿಸುತ್ತಿಲ್ಲವೆಂದು ಈ ಬಗ್ಗೆ ಆಶ್ರಯ ಸಾಲ ವಸೂಲಾತಿಯಲ್ಲಿ ಪ್ರಗತಿ ಸಾಧಿಸಿದ ಮುಂದೆ ಅರ್ಹ ಫಲಾನುಭವಿಗಳಿಗೆ ಮನೆಗಳ ನಿರ್ಮಾಣಕ್ಕೆ ಆರ್ಥಿಕ ಸಹಾಯ ದೊರೆಯುತ್ತದೆ. ಇಲ್ಲವಾದಲ್ಲಿ ಮನೆಗಳ ನಿರ್ಮಾಣಕ್ಕೆ ಮಾಡಲು ಆರ್ಥಿಕ ತೊಂದರೆ ಉಂಟಾಗುವುದಾಗಿ ತಿಳಿಸುತ್ತಾ, ಆಶ್ರಯ ಸಮಿತಿ ಸದಸ್ಯರು ಕಂದಾಯ ಪರಿವೀಕ್ಷಕರುಗಳು ಸ್ಥಳಕ್ಕೆ ಭೇಟಿ ನೀಡಿ ಆಶ್ರಯ ಸಾಲ ವಸೂಲಾತಿ ಬಗ್ಗೆ ಕ್ರಮವಹಿಸಲು ತಿಳಿಸಿದರು.

ಇತರೆ ಯಾವುದೇ ವಿಷಯಗಳುಇಲ್ಲದ್ದರಿಂದ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ನಗರ ಆಶ್ರಯ ಸಮಿತಿ
ನಗರಸಭೆ,
ಚಿಕ್ಕಮಗಳೂರು

PDF Created with deskPDF PDF Writer - Trial :: http://www.docudesk.com